ದಿನಾಂಕಃ 17-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>- 1 ರಿಂದ 3 ನೇ ಪ್ರತಿವಾದಿ ಪರವಾಗಿ ಶ್ರೀ. ವಿ.ಆರ್.ಆರ್. ವಕೀಲರಿಂದಃ-**

ಶೆಟ್ಟಿಹಳ್ಳಿ ಗ್ರಾಮದಲ್ಲಿರುವ ಗುಟ್ಟೆ ಕರಿಯಪ್ಪನವರ ಮಗ ಚಂದ್ರಗಿರಿ ರಂಗಪ್ಪನವರನ್ನು ನಾನು ನೋಡಿರುವುದಿಲ್ಲ ಆದರೆ ಚಂದ್ರಗಿರಿ ಕರಿಯಪ್ಪನ ಮಗ ಗುಟ್ಟೆ ಕರಿಯಪ್ಪನವರನ್ನು ನೋಡಿರುತ್ತೇನೆ. 4 ನೇ ವಾದಿಯ ತಂದೆಯ ಹೆಸರು ಚಂದ್ರಗಿರಿ ರಂಗಪ್ಪ ಎಂಬುದಾಗಿರುತ್ತದೆ. ವಾದಿ ಮತ್ತು ಪ್ರತಿವಾದಿಯರ ಕುಟುಂಬದಲ್ಲಿ ಆಗಿರುವ ಜಮೀನಿಗೆ ಸಂಬಂಧಪಟ್ಟ ವ್ಯವಹಾರಗಳ ಬಗ್ಗೆ ಮಾತ್ರ ನನಗೆ ಮಾಹಿತಿ ಇದೆ. ವಾದಿ ಈ ದಾವೆಯನ್ನು ಸರ್ವೆ ನಂಬರ್ 126 ರ ಜಮೀನಿಗೆ ಸಂಬಂಧಪಟ್ಟಂತೆ ಹಾಕಿದ್ದಾರೆ. ಸರ್ವೆ ನಂಬರ್ 126 ರ ಜಮೀನು 4 ನೇ ವಾದಿಯ ತಂದೆ ಚಂದ್ರಗಿರಿ ರಂಗಪ್ಪನವರು ಖರೀದಿಸಿದ ಆಸ್ತಿಯಾಗಿರುತ್ತದೆ. ಆ ಆಸ್ತಿಯ ಕ್ರಯ ಪತ್ರವನ್ನು ನಾನು ನೋಡಿರುತ್ತೇನೆ . ಆ ಜಮೀನಿಗೆ ಸಂಬಂಧಪಟ್ಟ ಕ್ರಯ ಪತ್ರ ನಿಪಿ.1 ಆಗಿರುತ್ತದೆ. ಆ ಕ್ರಯಪತ್ರದಂತೆ ಸರ್ವೆ ನಂಬರ್ 59/5 ತಪ್ಪಾಗಿ ನಮೂದಾಗಿರುತ್ತದೆ. 4 ನೇ ವಾದಿಯ ತಂದೆ ಚಂದ್ರಗಿರಿ ರಂಗಪ್ಪನವರು ಸರ್ವೆ ನಂಬರ್ 59/5 ರ ಆಸ್ತಿಯನ್ನು ಖರೀದಿಸಿದ್ದು, ನಾನು ತಪ್ಪಾಗಿ ಸರ್ವೆ ನಂಬರ್ 126 ರ ಜಮೀನನ್ನು ಖರೀದಿಸಿದ್ದಾರೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾಡಗಾನಹಟ್ಟಿ ಗ್ರಾಮದ ಚಿಕ್ಕಣ್ಣನವರ ಹೆಂಡತಿ ರಂಗಮ್ಮ, ರಂಗಮ್ಮನ ಮಗಳು

ಈರಮ್ಮ ಎಂಬುವವರನ್ನು ನೋಡಿರುತ್ತೇನೆ. ಸರ್ವೆ ನಂಬರ್ 126 ರ ಜಮೀನನ್ನು ಚಿಕ್ಕಣ್ಣನ ಹೆಂಡತಿ ರಂಗಮ್ಮ ಮತ್ತು ಅವರ ಮಗಳು ಈರಮ್ಮನವರು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಸೇರಿದ ಜಮೀನಿನ ಸರ್ವೆ ನಂಬರ್ 23/1 ಆಗಿರುತ್ತದೆ. ಸರ್ವೆ ನಂಬರ್ 126 ರ ಒಟ್ಟು ವಿಸ್ತೀರ್ಣ 5 ಎಕರೆ 20 ಗುಂಟೆ ಆಗಿರುತ್ತದೆ. ಈ ಜಮೀನಿನ ಚೆಕ್ಕುಬಂಧಿ ಪೂಃ ಈರಣ್ಣನವರ ಜಮೀನು, ಪಃ ವೀರೇನಹಳ್ಳಿ ಗಡಿ, ಉಃ ಸರ್ಕಾರಿ ಗುಟ್ಟೆ, ದಃ ಚಿಕ್ಕಕರಿಯಪ್ಪನ ಜಮೀನು ಆಗಿರುತ್ತದೆ. ಈ ಮೇಲೆ ಹೇಳಲಾದ ಚೆಕ್ಕುಬಂಧಿ ನಿಪಿ.1 ರ ಕ್ರಯಪತ್ರದಂತೆ ಸರ್ವೆ ನಂಬರ್ 59/5 ಕ್ಕೆ ಸಂಬಂಧಪಟ್ಟ ಚೆಕ್ಕುಬಂಧಿ ಎಂದರೆ ಸರಿಯಲ್ಲ.

ಈ ಮೇಲೆ ಹೇಳಲಾದ ಚೆಕ್ಕುಬಂಧಿಯಲ್ಲಿ ಸರ್ವೆ ನಂಬರ್ 126 ರ ಜಮೀನು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್ 126 ರ ಚೆಕ್ಕುಬಂದಿ ಪೂಃ ಈರಮರಿಯಪ್ಪನ ಜಮೀನು, ಪಃ ಕರೆಂಟ್ ಈರಣ್ಣನವರ ಜಮೀನು ಉಃ ಮುದ್ದಕ್ಕ ಮತ್ತು ಸಣ್ಣೀರಮ್ಮನ ಜಮೀನು, ದಃ ಭದ್ರಣ್ಣನ ಜಮೀನು ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಪ್ರತಿವಾದಿ 1 ರಿಂದ 3 ರವರು ಸ್ವಾಧೀನಾನುಭವ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಿದ ನಂತರ ದಾವ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿಗೆ ಸಂಬಂಧಪಟ್ಟ ಪಹಣಿ ಮತ್ತು ಮ್ಯೂಟೇಶನ್ ವಹಿ ಯಾರ ಹೆಸರಿನಲ್ಲಿದೆ ಎಂಬುದು ನನಗೆ ಗೊತ್ತಿಲ್ಲ. ಆ ಆಸ್ತಿಯ ದಾಖಲೆಗಳು ಪ್ರತಿವಾದಿಯರ ಹೆಸರಿನಲ್ಲಿವೆ

ಎಂದರೆ ಸರಿಯಲ್ಲ. ನಾನು ಮತ್ತು 4 ನೇ ವಾದಿ ಪರಸ್ಪರ ವಿಶ್ವಾಸಿಗಳು ಎಂದರೆ ಸರಿಯಲ್ಲ. ಸಾಕ್ಷಿಯು ಒಂದೇ ಊರಿನವರು ಎಂದು ಸ್ವತಃ ನುಡಿಯುತ್ತಾರೆ. ನಾನು ಮತ್ತು 4 ನೇ ವಾದಿ ಪರಸ್ಪರ ಸಂಬಂಧಿಕರು ಮತ್ತು ಅಕ್ಕಪಕ್ಕದ ಮನೆಯವರು ಎಂದರೆ ಸರಿಯಲ್ಲ. ನಾನು 4 ನೇ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ